ಭಾಗ, ಕರಡಿ ಎನ್ನುವ ಅರ್ಥವನ್ನೂ ಹಚ್ಚಲಾಗಿದೆ. ಹಿಮಾಲಯದ ತಪ್ಪಲಲ್ಲಿ ಮಾತ್ರವಲ್ಲ – ಪಾಶ್ಚಿಮಾತ್ಯ ದೇಶಗಳಲ್ಲೂ ಯೇತಿಯ ದಂತಕಥೆಗಳಿವೆ. ಕೆಲವರ ಕಣ್ಣಿಗೆ ಯೇತಿ ರಮ್ಯಪ್ರಾಣಿಯಾಗಿದ್ದರೆ, ಮತ್ತೆ ಕೆಲವರ ಕಲ್ಪನೆಯಲ್ಲಿ ಕ್ರೂರಪ್ರಾಣಿ. ಹಿಂಸ್ರಪಶುವನ್ನಾಗಿ ಹಿಮಮಾನವನನ್ನು ನೋಡುವವರು ಅದನ್ನು ಸೈತಾನ ಎಂದು ಕರೆದಿರುವುದೂ ಇದೆ.

ಯೇತಿ ಎನ್ನುವುದು ನೈಜ ಪ್ರಾಣಿಯೋ ಕಲ್ಪನೆಯಲ್ಲಿ ಜೀವಂತವಿರುವ ಹಿಮಮಾನವನೋ ಎಂದು ಹೇಳುವುದು ಅಷ್ಟು ಸುಲಭವಲ್ಲ. ಕುರೂಪಿ ಹಿಮಮಾನವನನ್ನು ನೋಡಿರುವುದಾಗಿ ಅನೇಕರು ಹೇಳಿಕೊಂಡಿದ್ದಾರೆ. ಮತ್ತೆ ಕೆಲವರು ಹೆಜ್ಜೆಗುರುತುಗಳ ಫೋಟೊ ತೆಗೆದು, ಯೇತಿಯ ಅಸ್ತಿತ್ವದ ಬಗ್ಗೆ ಪುರಾವೆ ಒದಗಿಸಿದ್ದಾರೆ. ತಲೆಬುರುಡೆ, ಕೂದಲುಗಳನ್ನು ಸಂಗ್ರಹಿಸಿದ 'ಯೇತಿಯಿಸ್ಟ್'ಗಳೂ ಇದ್ದಾರೆ. ಜಾನಪದ ಕಥೆಗಳಲ್ಲಂತೂ ಯೇತಿ ಬಹು ಜನಪ್ರಿಯ ಪಾತ್ರ. ಸಿನಿಮಾಗಳಲ್ಲಿ, ಕಾರ್ಟೂನ್‌ಗಳಲ್ಲಿ ಕೂಡ ಈ ದೈತ್ಯ ಹಿಮಮಾನವ ಮತ್ತೆ ಮತ್ತೆ ಜೀವತಳೆಯುತ್ತಲೇ ಬಂದಿದ್ದಾನೆ.

ಕಳೆದೊಂದು ಶತಮಾನದಿಂದ ಯೇತಿಯ ಹುಡುಕಾಟದ ಬಗ್ಗೆ ಸ್ಪಷ್ಟ ದಾಖಲೆಗಳಿದ್ದರೂ, ಜಗತ್ತನ್ನೇ ಗೆಲ್ಲಲು ಹಂಬಲಿಸಿದ ಅಲೆಕ್ಸಾಂಡರ್ ಕಾಲದೊಂದಿಗೂ ಯೇತಿಯ ಕಥೆಗಳು ತಳಕು ಹಾಕಿಕೊಂಡಿವೆ. ಭಾರತದ ಮೇಲೆ ದಂಡೆತ್ತಿ ಬಂದ ಅಲೆಕ್ಸಾಂಡರ್, ಇಲ್ಲಿನ ಯೇತಿಯ ಕಥೆಗಳಿಂದ ಪ್ರಭಾವಿತನಾಗಿದ್ದನಂತೆ. ತಮಗೊಂದು ಯೇತಿಯನ್ನು ತಂದುಕೊಡುವಂತೆ ಸ್ಥಳೀಯರನ್ನು ಕೇಳಿದ್ದನಂತೆ. ಹಿಮಪರ್ವತಗಳ ಎತ್ತರದಲ್ಲಿ ವಾಸಿಸುವ ಅವುಗಳನ್ನು ಕೆಳಗೆ ತರುವುದು ಸಾಧ್ಯವಿಲ್ಲ. ಹಿಮಪ್ರದೇಶದಿಂದ ಹೊರಗೆ ತಂದರೆ ಅವು ಬದುಕುಳಿಯುವುದಿಲ್ಲ ಎಂದು ಸ್ಥಳೀಯರು ಅಲೆಕ್ಸಾಂಡರನನ್ನು ಬರಿಗೈಯಲ್ಲಿ ಕಳಿಸಿದರಂತೆ.

ನೇಪಾಳದ ಜಾನಪದ ಕಥನಗಳ ಪ್ರಕಾರ – ಚಿಂಪಾಂಜಿಯ ಹಿರಿಯ ಸೋದರನಂತೆ ಕಾಣಿಸುವ ಯೇತಿ ಮನುಷ್ಯನಿಗಿಂತ ಗಾತ್ರ ಹಾಗೂ ಎತ್ತರದಲ್ಲಿ ದೊಡ್ಡದು. ಹಿಮಾಲಯ, ಸೈಬೀರಿಯಾ, ಮಧ್ಯ ಹಾಗೂ ಪೂರ್ವ ಏಷ್ಯಾ ಇವುಗಳ ನೆಲೆ. ಸ್ಥಳೀಯ ಜನರ ಆರಾಧನೆಗೆ ಪಾತ್ರವಾದ ಈ ಹಿಮಮಾನವ, ವಿಷಲ್‌ನಂತೆ ಧ್ವನಿ ಹೊರಡಿಸುತ್ತ ಸಾಗುತ್ತದೆ ಹಾಗೂ ಕೈಯಲ್ಲಿ ದೊಡ್ಡದೊಂದು ಕಲ್ಲನ್ನು ಹಿಡಿದಿರುವ ಆಯುಧಧಾರಿ.

ನಾಲ್ಕು ಶತಮಾನಗಳ ಹಿಂದೆ ಗೌರಿಶಂಕರದ ತಪ್ಪಲಿನಲ್ಲಿರುವ ಪಾಂಹಬೋಚೆ ಎನ್ನುವ ಗ್ರಾಮದ ಗುಹೆಯೊಂದರಲ್ಲಿ ಸಂಗ್ವಾ ದೋರ್ಜೆ ಎಂಬ ಯತಿ ತಪಸ್ಸು ಮಾಡುತ್ತಿದ್ದರಂತೆ. ಆಗ ಆ ಒಂಟಿ ತಪಸ್ವಿಯನ್ನು ಯೇತಿಗಳು ಉಪಚರಿಸುತ್ತಿದ್ದವು. ಯೇತಿಯೊಂದು ಮರಣಹೊಂದಿದಾಗ ಅದರ ತಲೆಬುರುಡೆಯನ್ನು ಹೂತು, ಆ ಜಾಗದಲ್ಲಿ ಸಂಗ್ವಾ ಅವರು ಮಂದಿರವೊಂದನ್ನು ನಿರ್ಮಿಸಿದರು ಎನ್ನುವ ಕಥೆಯೂ ಯೇತಿಗೆ ಸಂಬಂಧಿಸಿದಂತೆ ಇದೆ.

1920ರ ಸುಮಾರಿಗೆ ಯೇತಿಯ ಕಥೆಗಳು ಎಷ್ಟು ಜನಪ್ರಿಯವಾಗಿದ್ದವೆಂದರೆ, ಅವುಗಳನ್ನು ನೋಡುವ ಆಸೆಯಿಂದಲೇ ನೇಪಾಳದಲ್ಲಿ ಹಿಮಾಲಯದ ಚಾರಣ ಕೈಗೊಳ್ಳುತ್ತಿದ್ದವರು ಸಾಕಷ್ಟಿದ್ದರು. ಯೇತಿಯ ಕಥೆ–ಕಲ್ಪನೆಗಳಿಂದ ಪ್ರಭಾವಿತರಾಗಿದ್ದ ಈ ಚಾರಣಿಗರು ಅಂಗುಷ್ಠದಿಂದ ತಲೆಬುರುಡೆಯವರೆಗೆ ಯೇತಿಯ ಅಸ್ತಿತ್ವವನ್ನು ತಮಗೆ ಕಂಡಂತೆ ಪೋಷಿಸಿದರು. ಯೇತಿಯ ಹೆಜ್ಜೆಗುರುತು ಕಂಡೆವೆಂದವರು, ಕೂದಲಿನ ಸಾಕ್ಷ್ಯ ಸಂಪಾದಿಸಿದವರು ಸಾಕಷ್ಟು ಮಂದಿಯಿದ್ದವರು. ಆದರೆ, ಯಾರೊಬ್ಬರಿಗೂ ಈ ವಿಶಿಷ್ಟ ಪ್ರಾಣಿಯ ನಂಬಲರ್ಹ ಫೋಟೊವೊಂದನ್ನು ಸೆರೆಹಿಡಿಯುವುದು ಸಾಧ್ಯವಾಗಲಿಲ್ಲ. ಹಿಮಾಲಯದ ಪರಿಸರದಲ್ಲಿ ಸಂಗ್ರಹಿಸಲಾದ ಅವಶೇಷಗಳಿಂದ ಕೂಡ ಯೇತಿಯ ಅಸ್ತಿತ್ವವನ್ನು ವೈಜ್ಞಾನಿಕವಾಗಿ ಸಾಬೀತುಪಡಿಸಲು ಸಾಧ್ಯವಾಗಿಲ್ಲ. 2017ರಲ್ಲಿ ಅಂತರರಾಷ್ಟ್ರೀಯ ವಿಜ್ಞಾನಿಗಳ ಗುಂಪೊಂದು ಈ ಸ್ಯಾಂಪಲ್‌ಗಳ ಪರೀಕ್ಷೆ ನಡೆಸಿ, ಇವೆಲ್ಲ ಕರಡಿಗಳಿಗೆ ಸಂಬಂಧಿಸಿದವು ಎಂದು ಷರಾ ಬರೆದಿದೆ.

ಎವರೆಸ್ಟ್ ಏರಿದ ಮೊದಲಿಗರಲ್ಲೊಬ್ಬರಾದ ನೇಪಾಳಿ–ಭಾರತೀಯ ತೇನ್‌ಸಿಂಗ್ ಕೂಡ ಯೇತಿಯ ಬಗ್ಗೆ ಮಾತನಾಡಿದ್ದಾರೆ. ಯೇತಿ ಇರುವ ಬಗ್ಗೆ ತಮಗೆ ಬಲವಾದ ಶಂಕೆಯಿದೆ ಎಂದಿರುವ ಅವರು, ಜನರು ಹೇಳುವ ಯೇತಿಯಂಥ ಪ್ರಾಣಿಯನ್ನು ತಾನೆಂದೂ ನೋಡಿಲ್ಲ ಎಂದಿದ್ದಾರೆ. ಆದರೆ, ಅವರ ತಂದೆ ಒಂದೆರಡು ಬಾರಿ ನೋಡಿರುವುದಾಗಿ ತಿಳಿಸಿರುವ ನೆನಪು ಅವರಿಗಿದೆ. ಮತ್ತೊಂದು ಕಡೆ, ಯೇತಿಯನ್ನು ಬಾಲವಿಲ್ಲದ ಒಂದು ದೊಡ್ಡ ಕಪಿ ಎಂದೂ ಬಣ್ಣಿಸಿದ್ದಾರೆ.

## ಹಿಲರಿಯ ಕಥೆ

ಯೇತಿಯ ಬೆನ್ನು ಬಿದ್ದವರಲ್ಲಿ ಎಡ್ಮಂಡ್ ಹಿಲರಿ ಹಾಗೂ ಡೆಸ್ಮಂಡ್ ಡೊಯಿಗ್ ಮುಖ್ಯರಾದವರು. ಹಿಲರಿ ಅವರಿಗೆ ಯೇತಿಯ ಬಗ್ಗೆ ಕುತೂಹಲ ಮೂಡಲು ಅವರ ಕೌಟುಂಬಿಕ ಹಿನ್ನೆಲೆಯೂ ಕಾರಣವಾಗಿದೆ. ವೈದ್ಯಕೀಯ ಮಿಷನರಿಗಳಾಗಿ ಭಾರತಕ್ಕೆ ಬಂದ ಅವರ ಅಜ್ಜ–ಅಜ್ಜಿ ನೇಪಾಳಕ್ಕೆ ಹೊಂದಿಕೊಂಡ ಭಾರತದ ಪಶ್ಚಿಮ ಗಡಿಭಾಗದಲ್ಲಿ 1914ರಲ್ಲಿ ನೆಲೆಸಿದ್ದರು. ಜಿಮ್ ಕಾರ್ಬೆಟ್‌ನ ಹುಲಿಶಿಕಾರಿಯ ಕಥನಗಳಲ್ಲಿ ಬರುವ ದಟ್ಟ ಕಾಡಿನ ಪ್ರದೇಶವದು. 1946ರಲ್ಲಿ ಹಿಲರಿಯ ತಂದೆ–ತಾಯಿ ಕೂಡ ಆಸ್ಪತ್ರೆಯೊಂದನ್ನು ನಡೆಸುವ ಕನಸಿನೊಂದಿಗೆ ಭಾರತಕ್ಕೆ ಬಂದರು. ಹಾಗಿನ್ನೂ ಹಿಲರಿ ಕನಸುಕಂಗಳ ಬಾಲಕ. ಒಂದು ಶನಿವಾರ, ಪತ್ರಿಕೆಯೊಂದರಲ್ಲಿ ಪ್ರಕಟವಾಗಿದ್ದ ಅಸಹಜ ಹೆಜ್ಜೆಗುರುತಿನ ಚಿತ್ರವೊಂದು ಹುಡುಗನ ಗಮನಸೆಳೆಯಿತು. ಆ ವೇಳೆಗಾಗಲೇ ಬಾಲಕ ಹಿಲರಿಗೆ ವನ್ಯಮೃಗಗಳ ಬಗ್ಗೆ ಆಸಕ್ತಿ ಮೊಳೆದಿತ್ತು. 'ಈ ಚಿತ್ರ ವಿಚಿತ್ರವಾಗಿದೆಯಲ್ಲ' ಎಂದುಕೊಂಡು ಅಪ್ಪ ಮತ್ತು ತಾತನ ಬಳಿಗೆ ಓಡಿದಾಗ ಎದುರಾದ ಉತ್ತರ – 'ಡ್ಯಾನಿ, ಈ ಹೆಜ್ಜೆಗುರುತು ಯೇತಿಯದು.' 'ಏನಿದು ಯೇತಿ' ಎನ್ನುವ ಪ್ರಶ್ನೆಗೆ, 'ಯೇತಿ ಎನ್ನುವುದು ವನ್ಯ ಮಾನವ. ಅದು ಪರ್ವತಗಳಲ್ಲಿ ವಾಸಿಸುತ್ತದೆ' ಎನ್ನುವ ಉತ್ತರ. ಹಿಲರಿ ಅವರ ಮನಸ್ಸಿನಲ್ಲಿ ಯೇತಿಯ ಮೊದಲ ಚಿತ್ರ ಮೂಡಿದ್ದು ಹೀಗೆ. ಚಿಕ್ಕಂದಿನಿಂದಲೇ ಯೇತಿಯ ಬಗ್ಗೆ ಕುತೂಹಲ ಬೆಳೆಸಿಕೊಂಡ ಹಿಲರಿ ಅವರಿಗೆ

